# ಸ್ವಾಮಿ ವಿವೇಕಾನಂದ:
# ಭಾರತದ ಸಾಂಸ್ಕೃತಿಕ ರಾಯಭಾರಿ

**ಸ್ವಾ**ಮಿ ವಿವೇಕಾನಂದರು ಒಬ್ಬರು ವಿಶ್ವಮಾನವರು. ಅವರೇ ಹೇಳುತ್ತಾರೆ : "ನಾನು ಎಷ್ಟರಮಟ್ಟಿಗೆ ಭಾರತದವನೊ ಅಷ್ಟೇ ಪಶ್ಚಿಮಕ್ಕೂ ಸೇರಿದವನು." ಅವರ ವಿಚಾರವೈಶಾಲ್ಯತೆ ಯಾವುದೇ ಸೀಮಾ ಪರಿಮಿತಿಯನ್ನೂ ಮೀರಿಹೋಗಿತ್ತು. ಅವರ ವಿಶಾಲ ದೃಷ್ಟಿ ಅವರನ್ನು ಯಾವುದೇ ಒಂದು ತಾತ್ತ್ವಿಕ ಪರಿಧಿಯೊಳಗೆ ಸೀಮಿತಗೊಳಿಸುವಂತಿರಲಿಲ್ಲ. ಅವರ ವಿಶಾಲ ಮನೋಭಾವ ಯಾರನ್ನೂ ತಮ್ಮ ಭಾವ ಪರಿಧಿಯಿಂದ ಹೊರಗಿರಿಸಲು ಸಾಧ್ಯ ವಾಗುವಂತಿರಲಿಲ್ಲ. ಕೇವಲ ವೈಚಾರಿಕವಾಗಿ ಮತ್ತು ಮಾನಸಿಕವಾಗಿ ಮಾತ್ರವಲ್ಲದೆ ವ್ಯಾವಹಾರಿಕವಾಗಿಯೂ ಅವರು ಎಲ್ಲರೊಡನೆಯೂ ಎಲ್ಲರಂತೆಯೇ ಬೆರೆಯುವಂಥವರಾಗಿದ್ದರು. ಅವರ ಔದಾರ್ಯ ಇತರರ ಮತ್ತು ಪರಮತದ ದೋಷವನ್ನು ಲೆಕ್ಕಿಸದೆ ಎಲ್ಲರನ್ನೂ ಮತ್ತು ಎಲ್ಲವನ್ನೂ ಸ್ವೀಕರಿಸುವುದಾಗಿತ್ತು. ಅವರ ಆದರ್ಶವೇ ಸ್ವೀಕರಣೆ, ಕೇವಲ ಸಹನೆಯಲ್ಲ. ಸಹನೆಯೆಂದರೆ ಇತರರು ತಪ್ಪು ಎಂದು ತಿಳಿದೂ ಹೇಗೊ ಅವರಿಗೂ ಇರಲು ಅವಕಾಶ ಕೊಡುವುದು. ಅಲ್ಲಿ ಉಚ್ಚ-ನೀಚ ಭಾವವಿದೆ. ಆದರೆ ಸ್ವೀಕರಣ ದಲ್ಲಿ ಈ ಭೇದಭಾವವಿಲ್ಲ—ಎಲ್ಲರನ್ನೂ, ಎಲ್ಲವನ್ನೂ ನಮ್ಮವರೆಂದೇ, ನಮ್ಮ ವೆಂದೇ ಸ್ವೀಕರಿಸುವುದು.

> **ಕೊಲಂಬಸ್ ಅಮೆರಿಕದ ಭೂಮಿಯನ್ನು ಕಂಡುಹಿಡಿದನು, ಆದರೆ ವಿವೇಕಾನಂದರು ಅಮೆರಿಕದ ಜೀವಾತ್ಮನನ್ನು ಕಂಡುಹಿಡಿದರು.**
> —ಎಲಿಯನರ್ ಸ್ಟಾರ್ಕ್

ಜಗದ್ಗುರು (world teacher) ಅನಿಸಿಕೊಳ್ಳಲು ಸ್ವಾಮಿ ವಿವೇಕಾನಂದರು ಅತ್ಯಂತ ಅರ್ಹರಾಗಿರುವರು. ಅವರ ಸಂದೇಶ ಕೇವಲ ಭಾರತಕ್ಕೆ ಮಾತ್ರವಲ್ಲ. ಇಡೀ ವಿಶ್ವಕ್ಕೆ ಅನ್ವಯಿಸುವಂತಹುದು. ಜಗತ್ತಿನ ವಿಚಾರಧಾರೆಯನ್ನೇ ಬದಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಧರ್ಮದ ಅತ್ಯಂತ ಸಂಕುಚಿತ ಭಾವನೆಯಿಂದಾಗಿ ಧಾರ್ಮಿಕ ಹಿನ್ನೆಲೆಯನ್ನೆ ಕಳೆದುಕೊಳ್ಳುತ್ತಿದ್ದ ಪಶ್ಚಿಮ ಜಗತ್ತಿಗೆ ವೇದಾಂತದ ಅತ್ಯುದಾತ್ತ ಆದರ್ಶವನ್ನಿತ್ತು ಅಲ್ಲಿಯ ಜನರಲ್ಲಿ ಹೊಸ ಧಾರ್ಮಿಕ ಶ್ರದ್ಧೆಯನ್ನು ಕೆರಳಿಸಿದರು, ಧಾರ್ಮಿಕ ಚಿಂತನೆಯ ಹೊಸ ಆಯಾಮವನ್ನು ತೆರೆದರು. ಅಮೆರಿಕದ ಮೇಲೆ ಅವರ ಪ್ರಭಾವವನ್ನು ಕುರಿತು ಬರೆಯುತ್ತ, ಬಾಸ್ಟನ್ನಿನ ಎಲಿಯನರ್ ಸ್ಟಾರ್ಕ್ ಎಂಬುವವರು ಬರೆಯುತ್ತಾರೆ : "ಅಂದು ಅವರು ಅನ್ನಿಸ್ಕಾಮಿನ ಸಣ್ಣ ಒಂದು ಚರ್ಚಿನಲ್ಲಿ ನೀಡಿದ ಉಪನ್ಯಾಸ ಮುಂಬರುವ ಮಹಾ ಆಧ್ಯಾತ್ಮಿಕ ಬಿರುಗಾಳಿಯ ಮುನ್ಸೂಚಕವಾದ ಮಿಂಚಿನ ಬೆಳಕಿನಂತಿತ್ತು. ಈ ಬಿರುಗಾಳಿ ಚಿಕಾಗೋದ ವಿಶ್ವಧರ್ಮ ಸಮ್ಮೇಳನದ ಜಯಭೇರಿಯೊಂದಿಗೆ ಮಹಾಶಕ್ತಿ ಸಂಪನ್ನವಾಗಿ ದೇಶದ ಮಹಾನಗರ, ಪಟ್ಟಣ, ಹಳ್ಳಿ, ಮನೆಗಳ ಮೂಲಕ ಬೀಸಿ ಹೋಗಿ ಅಮೆರಿಕದ ಆಧ್ಯಾತ್ಮಿಕ ಬಂಜರುಭೂಮಿಯನ್ನು ನೀರೆರೆದು ಹಸನುಗೊಳಿಸಿತು."

ಸ್ವಾಮಿ ವಿವೇಕಾನಂದರ ಗುರು ಶ್ರೀರಾಮಕೃಷ್ಣರೇ ಅವರ ಬಗ್ಗೆ ಈ ರೀತಿ ಭವಿಷ್ಯ ನುಡಿದಿದ್ದರು: "ನರೇಂದ್ರ ಲೋಕಶಿಕ್ಷಣ ನೀಡುತ್ತಾನೆ." ಸ್ವಾಮಿ ವಿವೇಕಾನಂದರು ತಾನು ಒಲ್ಲೆನೆಂದಾಗ ಅವರಂದಿದ್ದರು: "ನೀನು ಮಾಡುವುದಿಲ್ಲವೆಂದರೂ ನಿನ್ನ ಎಲುಬುಗಳೇ ಮಾಡಿಸುತ್ತವೆ." ಅಂದರೆ ಸ್ವಾಮಿ ವಿವೇಕಾನಂದರು ಹುಟ್ಟಿದುದೇ ಈ ಒಂದು ಮಹತ್ಕಾರ್ಯವನ್ನು ಸಾಧಿಸುವುದಕ್ಕಾಗಿ.

ಸ್ವಾಮಿ ವಿವೇಕಾನಂದರನ್ನು ಯೋಧ ಸಂನ್ಯಾಸಿ (warrior monk) ಎಂದು ಕರೆಯುವುದುಂಟು. ಈ ವೀರಯೋಧನ ಶಸ್ತ್ರಾಸ್ತ್ರಗಳೇ ಶಾಸ್ತ್ರಾಧ್ಯಯನದಿಂದ ಪಡೆದ ಜ್ಞಾನಭಂಡಾರ; ಸುಭದ್ರ ಕವಚವೇ ಗುರುವಿತ್ತ ಆಧ್ಯಾತ್ಮಿಕ ಅನುಭವ. ಭಾರತದ ಕೀರ್ತಿಪತಾಕೆಯನ್ನು ಹಿಡಿದು ಆಧ್ಯಾತ್ಮಿಕವಾಗಿ ಜಗತ್ತನ್ನು ಗೆಲ್ಲಲು ಅವರು ಪಶ್ಚಿಮಕ್ಕೆ ಹೊರಟರು.

ಭಾರತ ಅಂದು ದಾಸ್ಯದಲ್ಲಿತ್ತು, ಜಗತ್ತಿನ ದೃಷ್ಟಿಯಲ್ಲಿ ಅದು ಕೇವಲ ಆರ್ಥಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ವಾಗಿಯೂ ಅತ್ಯಂತ ಹಿಂದುಳಿದ ರಾಷ್ಟ್ರ ವಾಗಿತ್ತು. ಭಾರತದ ಬಗೆಗಿನ ಜಗತ್ತಿನ ದೃಷ್ಟಿಕೋನವನ್ನೇ ಬದಲಾಯಿಸುವುದು ಸ್ವಾಮಿ ವಿವೇಕಾನಂದರ ಉದ್ದೇಶವಾಗಿತ್ತು. ಧಾರ್ಮಿಕತೆಯಲ್ಲಾಗಲಿ, ನೈತಿಕತೆಯಲ್ಲಾಗಲಿ, ಸಂಗೀತಕಲೆಗಳಲ್ಲಾಗಲಿ, ತತ್ತ್ವಶಾಸ್ತ್ರದಲ್ಲಾಗಲಿ ಭಾರತ ಬೇರೆ ಯಾವ ರಾಷ್ಟ್ರಗಳಿಗೂ ಕಡಿಮೆಯಲ್ಲ ಎಂಬುದನ್ನು ಸಾರಿ ಭಾರತದ ನೈಜ ಚಿತ್ರವನ್ನು ಜಗತ್ತಿಗೆ ನೀಡಿ ಭಾರತ ತನ್ನ ಕೀಳರಿಮೆಯನ್ನು ತೊರೆದು ಹೆಮ್ಮೆಯಿಂದ ಎದ್ದು ನಿಲ್ಲುವಂತೆ ಮಾಡುವುದು ಅವರ ಗುರಿಯಾಯಿತು. ಅಷ್ಟೇ ಅಲ್ಲದೆ ಭಾರತದ ಆಧ್ಯಾತ್ಮಿಕ ಸಂಪತ್ತನ್ನೂ ಮತ್ತು ವೇದಾಂತದ ಅತ್ಯುದಾತ್ತ ಭಾವನೆಗಳನ್ನೂ ಪಶ್ಚಿಮಕ್ಕೆ ನೀಡುವುದೂ ಅವರ ಉದ್ದೇಶವಾಗಿತ್ತು.

**ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾರತ ಒಂದು ಅತ್ಯಂತ ಅನಾಗರಿಕ ದೇಶವಾಗಿತ್ತು. ಎಲ್ಲೋ ಕೆಲವು ಪೌರಸ್ತ್ಯ ವಿದ್ವಾಂಸರನ್ನು ತೊರೆದು ಜನಸಾಮಾನ್ಯರಿಗೆ ನಿಜವಾದ ಭಾರತದ ಕಲ್ಪನೆ ಸ್ವಲ್ಪವೂ ಇರಲಿಲ್ಲ.**

ಸ್ವಾಮಿ ವಿವೇಕಾನಂದರು ಅಮೆರಿಕೆಗೆ ಹೋದಾಗ ಭಾರತದ ಬಗ್ಗೆ ಅಲ್ಲಿಯ ಜನಗಳಿಗಿದ್ದ ತಪ್ಪುಕಲ್ಪನೆಯನ್ನು ತಿಳಿದು ಅವರಿಗೇ ಆಶ್ಚರಿಯಾಯಿತು. ಹಲವು ಕಡೆ ತಮ್ಮ ಭಾರತೀಯ ಸಾಮಾಜಿಕ ನೀತಿ ಪದ್ಧತಿಗಳು, ಭಾರತೀಯ ಕಲೆಯ ಹಿರಿಮೆ, ನಾರಿಯರ ಆದರ್ಶ, ಭಾರತೀಯರ ನೈತಿಕ ಉನ್ನತಿ—ಇತ್ಯಾದಿ ಭಾರತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ತಮ್ಮ ವಾಕ್‌ಪ್ರವಾಹವನ್ನು ಹರಿಸಿ ಭಾರತದ ಬಗೆಗಿನ ತಪ್ಪುಕಲ್ಪನೆಯನ್ನು ಹೋಗಲಾಡಿಸಿದರು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆದ ನೋಬೆಲ್ ಪ್ರಶಸ್ತಿ ವಿಜೇತ ಫ್ರೆಂಚ್ ಕಾದಂಬರಿಕಾರ ರೋಮ್ಯೆ ರೋಲಾ ಅವರ ಬಗ್ಗೆ ಹೀಗೆ ಹೇಳುತ್ತಾರೆ : "ಸ್ವಾಮಿ ವಿವೇಕಾನಂದರು ಭರತದ ಅಂತಃಸಾಕ್ಷಿಯೇ ಆಗಿದ್ದರು, ಅದರ ಏಕತೆ ಮತ್ತು ಭವಿಷ್ಯದ ಮೂರ್ತರೂಪವಾಗಿದ್ದರು." ಆದ್ದರಿಂದಲೆ ಅವರು ಪ್ರಭುತ್ವಪೂರ್ಣವಾಗಿ ಭಾರತದ ನೈಜಚಿತ್ರವನ್ನು ಪಾಶ್ಚಾತ್ಯರ ಮುಂದಿಡಲು ಸಾಧ್ಯವಾಯಿತು. ಸಂಸ್ಕೃತಿಯ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ ಭಾರತ ಪ್ರಪಂಚದಲ್ಲೇ ಅತ್ಯಂತ ಹಿರಿಯ ರಾಷ್ಟ್ರ ಎಂಬುದನ್ನು ತೋರಿಸಿಕೊಟ್ಟರು. ಅವರು ವಿದೇಶಗಳಲ್ಲಿ ಸಾಧಿಸಿದ ಮಹತ್ ಕಾರ್ಯಗಳಲ್ಲಿ ಇದೊಂದು.

ಅವರು ಚಿಕಾಗೊ ವಿಶ್ವಧರ್ಮಸಮ್ಮೇಳನಕ್ಕೆ ಮೊದಲೇ ಅಮೇರಿಕದಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದ್ದರೂ ಅವರ ನಿಜವಾದ ಕಾರ್ಯ ಪ್ರಾರಂಭವಾದುದು, ಆ ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿ ತಮ್ಮ ಅದ್ಭುತ ಪ್ರತಿಭೆಯ ಮೂಲಕ, ರಾಜಗಾಂಭೀರ್ಯದ ವ್ಯಕ್ತಿತ್ವದ ಮೂಲಕ, ಮನಮೋಹಕ ಸ್ವರ್ಗೀಯ ಸೌಂದರ್ಯದ ಮೂಲಕ ಮತ್ತು ಚೈತನ್ಯವನ್ನು ಹೊರಚಿಮ್ಮುವ ತಮ್ಮ ಆಕರ್ಷಕ ಕಣ್ಣುಗಳ ಮೂಲಕ ಸಭಿಕರ ಮತ್ತು ಅಮೇರಿಕದ ಯುವಕ-ಯುವತಿಯರ ಹೃನ್ಮನವನ್ನು ಗೆದ್ದು ಇಡೀ ಪ್ರಪಂಚವೇ ಆಶ್ಚರ್ಯದಿಂದ ಭಾರತದ ಕಡೆ ಕಣ್ಣುಹಾಯಿಸುವಂತೆ ಮಾಡಿದಾಗ. ಇಂತಹ ಮಹಾನ್ ವ್ಯಕ್ತಿಯನ್ನು ಸೃಷ್ಟಿಸಬಲ್ಲ ಭಾರತಕ್ಕೆ ಧರ್ಮೋಪದೇಶ ನೀಡಲು ಕ್ರಿಶ್ಚಿಯನ್ ಮಿಷನರಿಗಳನ್ನು ಕಳಿಸುವುದು ನಾಚಿಕೆಗೇಡು, ಅಷ್ಟೇ ಅಲ್ಲ, ತಾವೇ ಭಾರತದ ಪದತಲದಲ್ಲಿ ಕುಳಿತು ಆಧ್ಯಾತ್ಮಿಕ ಜ್ಞಾನವನ್ನು ಪಡೆಯಬೇಕು—ಎಂದು ಅಲ್ಲಿಯ ಜನತೆ ಭಾವಿಸುವಂತಾಯಿತು.

ವಿಶ್ವಧರ್ಮಸಮ್ಮೇಳನದ ನಂತರ ಸ್ವಾಮೀಜಿ ಅಮೇರಿಕದ ವಿವಿಧ ಭಾಗಗಳಲ್ಲಿ ಸುತ್ತಾಡಿ ಭಾರತೀಯ ಸಂಸ್ಕೃತಿಯ ಮತ್ತು ಹಿಂದೂಧರ್ಮದ ಹಿರಿಮೆಯನ್ನು ಸಾರಿದರು. ಇದೇ ಸಂದರ್ಭದಲ್ಲಿ ಅವರಿಗೆ ಒಂದು ವಿಷಯ ಗಮನಕ್ಕೆ ಬಂತು. ಜಡವಾದದ ಪರಿಣಾಮವಾಗಿ ವಿಲಾಸಜೀವನದಲ್ಲಿ ಮಗ್ನರಾಗಿದ್ದ ಪಾಶ್ಚಾತ್ಯರಿಗೆ ಆಧ್ಯಾತ್ಮಿಕತೆಯ ಅಮೃತಸೇಚನದ ಆವಶ್ಯಕತೆಯಿದೆ ಎಂದೆನಿಸಿತು ಅವರಿಗೆ. ಧಾರ್ಮಿಕ ಸಂಕುಚಿತ ಭಾವನೆಯಿಂದ ಬೇಸತ್ತಿದ್ದ ಅವರು ಯಾವ ನಂಬಿಕೆಯ ನೆಲೆಯ ಆಧಾರವೂ ಇಲ್ಲದೆ ಜೀವನದ ಅರ್ಥಹೀನತೆಯಲ್ಲಿ ತೊಳಲಾಡುತ್ತಿದ್ದರು. ಅವರಲ್ಲಿ ಆಧ್ಯಾತ್ಮಿಕ ಬೀಜವನ್ನು ಬಿತ್ತಿ ಧಾರ್ಮಿಕ ನಂಬಿಕೆಯನ್ನು ಪುನಶ್ಚೇತನಗೊಳಿಸುವ ಅಗತ್ಯತೆಯನ್ನು ಕಂಡುಕೊಂಡರು. ಅವರು ತಮ್ಮ ಮೃತ್ಯುವಿಗೆ ಒಂದು ತಿಂಗಳ ಮುಂಚೆ ಹೀಗೆ ಬರೆದಿದ್ದರು,"ನಾನು ಭಾರತದಿಂದ ಪಶ್ಚಿಮಕ್ಕೆ ನೀಡುವ ಸಂದೇಶವೊಂದಿತ್ತು, ಮತ್ತು ನಾನದನ್ನು ಅಮೇರಿಕ ಮತ್ತು ಇಂಗ್ಲಿಷ್ ಪ್ರಜೆಗಳಿಗೆ ಧೈರ್ಯವಾಗಿ ಬಿತ್ತರಿಸಿದೆ." ಅವರು ಇನ್ನೊಂದು ಕಡೆ ಹೇಳುತ್ತಾರೆ, "ಬುದ್ಧನು ಪೂರ್ವಕ್ಕೆ ಸಂದೇಶ ನೀಡಿದಂತೆ ನಾನು ಪಶ್ಚಿಮಕ್ಕೆ ನೀಡುವ ಸಂದೇಶವೊಂದಿದೆ."

> **ವಿವೇಕಾನಂದರು ಅಮೇರಿಕದ ಆಳ ಚಿಂತನಾ ಧಾರೆಯ ಗತಿಯನ್ನು ಬದಲಾಯಿಸಿದರು.... ಅವರು ಪಶ್ಚಿಮದಲ್ಲಿ ಆಧ್ಯಾತ್ಮಿಕ ವ್ಯಾಕುಲತೆಯ ಬೀಜವನ್ನು ಬಿತ್ತಿದರು.**
>
> —*ನಿಮಾಯ್ ಸಾಧನ ಬೋಸ್*

ಅವರು ವೇದಾಂತದ ವಿಶಾಲ ಭಾವನೆಗಳನ್ನಿತ್ತು ಈ ಕಾರ್ಯವನ್ನು ನೆರವೇರಿಸಿದರು. ಯಾವುದೇ ಧಾರ್ಮಿಕ ಸಂಕುಚಿತ ಭಾವನೆಯನ್ನೂ ಅವರು ಬೋಧಿಸಲಿಲ್ಲ. ಧರ್ಮವೆಂದರೆ ಸತ್ಯಸಾಕ್ಷಾತ್ಕಾರ, ಆಂತರಿಕ ದಿವ್ಯತೆಯ, ಪರಿಪೂರ್ಣತೆಯ ಮತ್ತು ಪವಿತ್ರತೆಯ ಅಭಿವ್ಯಕ್ತಿ ಎಂದು ಬೋಧಿಸಿದರು. ಇದು ಎಲ್ಲ ಧರ್ಮಗಳಿಗೂ ಅನ್ವಯಿಸುವಂತಹುದು. ಇದಕ್ಕಾಗಿ ಯಾರೂ ತಮ್ಮ ಧರ್ಮವನ್ನು ಬಿಟ್ಟು ಪರಧರ್ಮವನ್ನು ಅವಲಂಬಿಸಬೇಕಾಗಿಲ್ಲ. ಒಂದು ಧರ್ಮ ಸತ್ಯವಾದರೆ ಎಲ್ಲ ಧರ್ಮಗಳೂ ಸತ್ಯ ಎಂದು ಅವರು ಸಾರಿದರು. ಮನುಷ್ಯನ ಸ್ವಭಾವದಲ್ಲಿಯೇ ವೈವಿಧ್ಯತೆ ಇರುವುದರಿಂದ ಧರ್ಮದಲ್ಲಿಯೂ ವೈವಿಧ್ಯತೆ ಅನಿವಾರ್ಯ, ಒಂದೇ ಧರ್ಮವನ್ನು ಎಲ್ಲರ ಮೇಲೂ ಹೇರುವಂತಿಲ್ಲ. ಒಂದೇ ಅಳತೆಯ ಕೋಟನ್ನು ಎಲ್ಲರೂ ಹಾಕಿಕೊಳ್ಳಲಾಗುವುದಿಲ್ಲ. ಧರ್ಮದ ಮೂಲತತ್ತ್ವ ಒಂದೇ ಆದರೂ ಆಚರಣೆಗಳಲ್ಲಿ ವೈವಿಧ್ಯ ಇರಲೇಬೇಕು. ಆದ್ದರಿಂದ ಬೇರೆ ಬೇರೆ ಧರ್ಮಾವಲಂಬಿಗಳಲ್ಲಿ ಪರಸ್ಪರ ವೈಷಮ್ಯ ಕಚ್ಚಾಟ ಇತ್ಯಾದಿಗಳು ಅಧಾರ್ಮಿಕತೆಯ ಚಿಹ್ನೆ. ಹೀಗೆ ಸ್ವಾಮಿ ವಿವೇಕಾನಂದರು ಧರ್ಮದ ವಿಶಾಲ ಭಾವನೆಗಳನ್ನಿತ್ತು ಜಗತ್ತಿನ ಕಣ್ತೆರಿಸಿದರು. *The Gift Unopened* ಎಂಬ ಪುಸ್ತಕದಲ್ಲಿ ಅಮೇರಿಕನ್ ಲೇಖಕರಾದ ಎಲಿಯನರ್ ಸ್ಟಾರ್ಕ್ ಬರೆಯುತ್ತಾರೆ: "ವಿವೇಕಾನಂದರು ತಮ್ಮ ಉದಾತ್ತ ವಿಚಾರಗಳ ಮೂಲಕ ಇಡೀ ಜಗತ್ತನ್ನೆ ಅಲುಗಾಡಿಸಿದರು. ಅವರ ಅದ್ಭುತವಾಣಿ ಕಾಲವೆ ಕಾಲವಾಗುವವರೆಗೂ ಕಾಲದ ಸಭಾಂಗಣದಲ್ಲಿ ಪ್ರತಿಧ್ವನಿಗೊಳ್ಳುತ್ತ ಹೋಗುವುದು."

೧೯೭೬ರಲ್ಲಿ ಅಮೇರಿಕ ಸರ್ಕಾರವು ವಾಷಿಂಗ್ಟನ್ನಿನ ಸ್ಮಿತ್ಸೋನಿಯನ್ ಇನ್ಸ್‌ಟಿಟ್ಯೂಟ್‌ನಲ್ಲಿ ಒಂದು ಮಹಾ ಪ್ರದರ್ಶನವನ್ನು ಏರ್ಪಡಿಸಿ ಅಲ್ಲಿ ಅಮೇರಿಕವನ್ನು ಸಂದರ್ಶಿಸಿದ ಪ್ರಪಂಚದ ಹದಿಮೂರು ಮಹಾನ್ ವ್ಯಕ್ತಿಗಳನ್ನು ಪರಿಚಯಿಸಿತು. ಆ ಹದಿಮೂರು ಜನ ಮಹಾವ್ಯಕ್ತಿಗಳಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು. ಇದರಿಂದ ಆ ದೇಶ ಸ್ವಾಮಿ ವಿವೇಕಾನಂದರಿಗೆ ಎಷ್ಟೊಂದು ಪ್ರಾಮುಖ್ಯ ನೀಡಿದೆ ಎಂಬುದು ಅರ್ಥವಾಗುವುದು. ❋